# ಒಳಾಂಗಣ ವಿನ್ಯಾಸಕ್ಕೆ ಟೆರಾರಿಯಂ

ಹೊಸ ಮನೆ ಕಟ್ಟಿ ಗೃಹಪ್ರವೇಶ ಆದ ಮೇಲೆ ಮನೆಯ ಒಳಾಂಗಣ ವಿನ್ಯಾಸ ವಿಭಿನ್ನವಾಗಿದ್ದು, ಆಕರ್ಷಕವಾಗಿರಬೇಕು ಎಂಬುದು ಎಲ್ಲರ ಕನಸು. ಟೆರಾರಿಯಂ ಒಳಾಂಗಣ ವಿನ್ಯಾಸದ ಅಂದಕ್ಕೆ ಹೇಳಿಮಾಡಿಸಿದಂತಿದ್ದು, ಮನೆಗೆ ಒಳ್ಳೆಯ ಲುಕ್ ಕೊಡುತ್ತದೆ.

■ ಪ್ರಭಾ ಪಿ. ಶಾಸ್ತ್ರಿ



ನಮ್ಮ ಕನಸಿನ ಮನೆ ಕಟ್ಟಲು ಪ್ರಾರಂಭಿಸಬೇಕು ಎನ್ನುವಾಗ ಮನೆ ಹೇಗಿರಬೇಕು? ಪ್ರವೇಶ ಎಲ್ಲಿ? ಹಾಲ್ ಹೇಗಿರಬೇಕು? ರೂಮ್‌ಗಳು ಎಲ್ಲೆಲ್ಲಿ ಇರಬೇಕು? ಅಡುಗೆ ಮನೆ ಮಾಡ್ಯುಲರ್ ಕಿಚನ್, ಇಂಡಿಯನ್ ಟಚ್, ಇಟಾಲಿಯನ್... ಹೀಗೆ ಹಲವಾರು ಮಾದರಿಯಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ತಲೆ ಕೆಡಿಸಿಕೊಳ್ಳುತ್ತೇವೆ. ಮನೆ ಕಟ್ಟಿಯಾದ ಮೇಲೆ ಒಳಾಂಗಣ ಅಲಂಕಾರ ಹೇಗೆ ಮಾಡಬೇಕು? ಎಲ್ಲೆಲ್ಲಿ ಏನೇನು ಇಡಬೇಕು? ಏನೇನು ಖರೀದಿಸಬೇಕು? ಎಂದು ಆಲೋಚನೆ ಶುರುವಾಗುತ್ತದೆ.

ನಾವೇ ರೆಡಿ ಮಾಡಿದ ವಸ್ತುಗಳನ್ನು ಇಟ್ಟರೆ ಅದು ಬೇರೆಯವರದಕ್ಕಿಂತ ಭಿನ್ನವಾಗಿ ಕಂಗೊಳಿಸುತ್ತದೆ. ಸ್ನೇಹಿತರು, ಬಂಧುಗಳು ಮನೆಗೆ ಬಂದಾಗ 'ಇದು ತುಂಬಾ ಚೆನ್ನಾಗಿದೆ' ಎಂದರೆ ಬೀಗುವ ಸರದಿ ನಮ್ಮದಾಗುತ್ತದೆ. ಒಳಾಂಗಣ ಆಲಂಕಾರಕ್ಕೆ ಹೇಳಿ ಮಾಡಿಸಿದಂತಿದೆ ಟೆರಾರಿಯಂ.

## ಏನಿದು ಟೆರಾರಿಯಂ?

ಇದನ್ನು ಮೊದಲು ಮಾಡಿದ್ದು ಸಸ್ಯಶಾಸ್ತ್ರ ವಿಜ್ಞಾನಿ `ನ್ಯಾತನಿಲ್ ಬ್ಯಾಗ್ ಶೋ ವರ್ಡ್ (**Nathaniel Bag Show Ward**)) 1842 ರಲ್ಲಿ. ಒಂದು ಪ್ರಯೋಗ ಮಾಡುವಾಗ ಒಂದು ಗಾಜಿನ ಜಾರಿನಲ್ಲಿ ಒಂದು ಬೀಜವು ಉಳಿದಿತ್ತು, ಅದು ಕೆಲವು ದಿನಗಳಲ್ಲಿ ಮೊಳಕೆಯೊಡೆದು ಗಿಡವಾಯಿತು. ಇದು ಮೊದಲ ಟೆರಾರಿಯಂಗೆ ನಾಂದಿಯಾಯಿತು. ಇದರ ಬಗ್ಗೆ ಆಸಕ್ತಿ ತೋರಿ ಮುಂದುವರೆಸಿದ, ಮುಂದೆ ಸಿಡ್ನಿಯಿಂದ ಆಸ್ಟ್ರೇಲಿಯಾಕ್ಕೆ, ಆಸ್ಟ್ರೇಲಿಯಾದಿಂದ ಲಂಡನ್‌ಗೆ ಹಲವು ಗಿಡಗಳನ್ನು ತೆಗೆದುಕೊಂಡು ಹೋದರು.

ಟೆರಾರಿಯಂ ಕಾರ್ಯ ನಿರ್ವಹಣೆ ಹೇಗೆ?

ಪಾರದರ್ಶಕ ಗಾಜಿನ ಕಂಟೆನೆರ್ನಲ್ಲಿ ಮಣ್ಣು ಮತ್ತು ಗಿಡ ಇರುತ್ತದೆ. ಪಾರದರ್ಶಕ ಗಾಜು ಬಿಸಿ ಮತ್ತು ಬೆಳಕುಗಳಿಗೆ ಅವಕಾಶ ಮಾಡಿಕೊಡುತ್ತದೆ, ಆವಿಯಾದ ನೀರು ಗಾಜಿನ ಗೋಡೆಯ ಮೇಲೆ